ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿಯೇನೆಂದರೆ, ಕೊಡಗಿನ ವೀರರಾಜ, ಲಿಂಗರಾಜ ಗದ್ದುಗೆ ಬಗ್ಗೆ ನಾವು ಮತ್ತು ಶಿವಪ್ಪನವರು ತಮ್ಮ ಬಳಿ ಬಂದು ಪ್ರಸ್ತಾಪಿಸಿದ್ದೆವು.

ಅಧ್ಯಕ್ಷರು: ಈಗ ೬.೩೦ ಗಂಟೆಗೆ ಒಂದು ಸಮಾರಂಭವಿದೆ. ಆದರೆ, ಕೆ. ಎ. ಪಿ.ಎಲ್ ವಿಚಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಒಂದು ಹೇಳಿಕೆಯಾಗಬೇಕು, ಬಿ ಪಿ ಎಲ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಹೇಳಿಕೆ ಆಗಬೇಕು ಹಾಗೂ ಸುರತ್ಕಲ್ ಗಲಭೆ ವಿಚಾರದಲ್ಲಿ ಗೃಹಮಂತ್ರಿಗಳಾದ ಪಿ. ಜಿ. ಆರ್. ಸಿಂಧ್ಯ ಅವರಿಂದ ಒಂದು ಹೇಳಿಕೆಯಾಗಬೇಕು. ಇದಕ್ಕೆಲ್ಲ ಈಗ ಸಮಯವೆಲ್ಲಿದೆ? ನೀವೇ ನೋಡುತ್ತಿದ್ದೀರಲ್ಲಾ. ನೀವು ಪ್ರಸ್ತಾಪಿಸುತ್ತಿರುವ ವಿಚಾರವನ್ನು ನಾಳೆ ದಿವಸದ ಕಾರ್ಯಕಲಾಪದ ಪಟ್ಟಿಗೆ ಸೇರಿಸಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ತಮ್ಮ ಅಸಹಾಯಕತೆಯನ್ನು ಒಪ್ಪಿಕೊಳ್ಳುತ್ತೇ. ಆದರೆ, ಅಲ್ಲಿ ಶಾಂತಿ ಸುವ್ಯವಸ್ಥೆಯ ವಿಚಾರ.....

ಅಧ್ಯಕ್ಷರು : ತಮಗೆ ಹೇಳಬೇಕೆಂದರೆ, ಅಜೆಂಡಾ ಆಗಲೇ ಸರ್ಕ್ಯುಲೇಟ್ ಆಗಿದ್ದರಿಂದ ನಾನು ವಿಶೇಷ ಸೂಚನೆ ಕೊಟ್ಟು ನಾಳೆ ದಿವಸದ ಕಾರ್ಯಕಲಾಪಗಳ ಪಟ್ಟಿಗೆ ಸೇರಿಸಿದ್ದೇನೆ.

9. ಕೊಡಗಿನ ವೀರರಾಜ, ಲಿಂಗರಾಜ ಗದ್ದುಗೆ ಬಗ್ಗೆ.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಅಧ್ಯಕ್ಷರೆ, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ, ಜಿಲ್ಲಾ ಪ್ರಸ್ತಾಪ ಮಾಡುವುದಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದು, ಗೃಹಮಂತ್ರಿಗಳ ಗಮನಕ್ಕೆ ಈ ವಿಷಯ ಬಂದಿರಬಹುದು. ಅಲ್ಲಿರುವ ಜಾಗ ಯಾರದು ಎಂದು ಗೊತ್ತಿಲ್ಲ. ಅದು ಪ್ರಾಚ್ಯವಸ್ತು ಇಲಾಖೆಯ ಕೈಯಲ್ಲಿದ್ದರೂ ನಮ್ಮ ಕೈಯಲ್ಲಿದೆ ಎಂದು ಅವರು ಹೇಳುತ್ತಾರೆ. ಅಲ್ಲಿ ಮನೆಗಳಾಗುತ್ತಿದೆ, ಮಸೀದಿಯಾಗುತ್ತಿದೆ. ಎಲ್ಲರೂ ಅಲ್ಲಿಗೆ ಬಂದು ಜಾಗವನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಆದರೆ, ಯಾರೂ ಕೂಡ ಆ ಕುರಿತು ಮಾತನಾಡುತ್ತಿಲ್ಲ. ರಾಜರ ಗದ್ದುಗೆ ಸಂಪೂರ್ಣ ಕೈತಪ್ಪಿ ಹೋಗುವಂಥ ಹಂತದಲ್ಲಿದೆ. ಅವರು ರಿಪೇರಿ ಮಾಡಬೇಕು, ಮಾಡುತ್ತಿಲ್ಲ. ಕೊಡಗು ಬಗ್ಗೆ ತಮಗೆ ಗೊತ್ತಿದೆ. ಕೊಡಗಿನ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಕೊಡಗು ಪ್ರತ್ಯೇಕವಾಗಬೇಕೆಂದು ಕೇಳುತ್ತಿರುವುದಕ್ಕೆ ಕಾರಣವಿದೆ. ಕೊಡಗನ್ನು ನಿರ್ಲಕ್ಷಿಸಿದ್ದಾರೆಂಬ ಭಾವನೆ ಅವರ ಮನಸ್ಸಿನಲ್ಲಿದೆ. ನಿನ್ನೆ ನಾನು ಟಿ.ವಿ.ಯಲ್ಲಿ ವೀಕ್ಷಿಸಿದೆ, ಕಾವೇರಿ ಯೋಜನೆಗೆ ನಾವು ಬಹಳಷ್ಟು ಹಣ ಖರ್ಚು ಮಾಡಿದ್ದೇವೆ, ಆದರೆ, ಅಲ್ಲಿ ಏನೂ ಪ್ರಯೋಜನವಾಗುತ್ತಿಲ್ಲ. ಕಾವೇರಿ ಬಗ್ಗೆ ನಾವೆಲ್ಲರೂ ಭಾರಿ ಚರ್ಚೆ ಮಾಡುತ್ತೇವೆ, ಇಲ್ಲಿ ಎಲ್ಲರೂ ಕೈಮುಗಿಯುತ್ತೇವೆ. ಕಾವೇರಿ ನದಿಯ ಉಗಮ ಸ್ಥಾನದಲ್ಲಿ ಒಂದು ಕೆಲಸವಾಬೇಕು, ಆಗುತ್ತಿಲ್ಲ. ಈಗ ಕೊಡಗಂತೂ ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿದೆ, ಗದ್ದುಗೆಯಂತೂ ಬೆಂಕಿ ಹತ್ತಿ ಉರಿಯುತ್ತಿದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಲು ಇಚ್ಛಿಸುವುದಿಲ್ಲ. ಏನಾಗುತ್ತದೋ ಆಗಲಿ, ನಂತರ ಬೇಕಾದರೆ ಸರ್ಕಾರ ಅದರ ಬಗ್ಗೆ ಗಮನಹರಿಸಲಿ.

ಅಧ್ಯಕ್ಷರು : ಶಿವಪ್ಪನವರೇ, ತಾವು ಹಿರಿಯ ಸದಸ್ಯರಿದ್ದೀರಿ, ಆ ವಿಚಾರವನ್ನು ನಾನು ನಾಳೆಯ ದಿವಸಕ್ಕೆ ಪೋಸ್ಟ್‌ಪೋನ್ ಮಾಡಿಸಿದ್ದೇನೆ. ನಾಳೆ ಸದಸನದ ಮುಂದೆ ವಿಚಾರ ಪ್ರಸ್ತಾಪವಾದಾಗ ತಾವು ಚರ್ಚೆ ಮಾಡಿ ಸರ್ಕಾರಕ್ಕೆ ಹೇಳಿ, ಸರ್ಕಾರವು ಸಹ ನನ್ನ ನಿಲುವು ಏನೆಂದು ವ್ಯಕ್ತಪಡಿಸುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ನಾನು ಪ್ರಾಚ್ಯವಸ್ತು ಇಲಾಖೆಗೆ ಸಂಬಂಧಿಸಿದಂತೆ ನೋಟೀಸ್ ಕೊಟ್ಟಿದೆದ, ಆದರೆ, ಧಾರ್ಮಿಕ ಮತ್ತು ದತ್ತಿ ಇಲಾಖಾ ಮಂತ್ರಿಗಳಿಗೆ ಹೋಗಿದೆ. ಸದರಿ ವಿಷಯ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರಿಗೆ ಸಂಬಂಧಿಸಿದಂತೆ ಕಾಣುತ್ತದೆ. ಈ ವಿಚಾರದಲ್ಲಿ ಕೊಡಗಿನಲ್ಲಿ ತುಂಬಾ ಗೊಂದಲವುಂಟಾಗುತ್ತಿದೆ. ಇಲ್ಲಿ ಅಧಿವೇಶನದಲ್ಲಿ ಏನಾಗುತ್ತದೆಂದು ಅಲ್ಲಿ ಅವರು ಕಾಯುತ್ತಿದ್ದಾರೆ, ಕಾದು ಮುಂದಿನ ಕೆಲಸವನ್ನು ಅವರು ಪ್ರಾರಂಭಿಸುತ್ತಾರೆ.

ಶ್ರೀ ಹೆಚ್. ಡಿ. ಬಸವರಾಜು : ಒಂದು ವಿಚಾರ ಏನಿದೆಯೆಂದರೆ, ಅಲ್ಲಿ ಕೆಲವು ಪಕ್ಷದ ಪ್ರಮುಖರು ಸೈಟುಗಳನ್ನು ವಿಂಗಡಿಸಿ ವಿತರಣೆ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆಂಬ ಹೇಳಿಕೆಯನ್ನು ಕೊಡುತ್ತಿದ್ದಾರೆ. ಇವೊತ್ತು ಶಾಂತಿ ಸಂಪೂರ್ಣ ಕಲುತ್ತಿದೆ. ಆದುದರಿಂದ, ಆ ವಿಚಾರದಲ್ಲಿ ತಾವು ಗಂಭೀರವಾಗಿ...

ಅಧ್ಯಕ್ಷರು : ಅದನ್ನು ಪ್ರತ್ಯೇಕವಾಗಿ ಹೇಳಬೇಕೇ? ಯಾವುದೋ ಕೆಲವು ಪಕ್ಷದ ಪ್ರಮುಖರು ಎಂದರೆ ಶಾಂತಿ ಕದಲುವುದೇ ನಾವು ಇರುವುದು ಇನ್ನೇತಕ್ಕೆ? ಆ ವಿಚಾರ ಗೊತ್ತಿದೆ.

ಶ್ರೀ ಎಂ. ಪಿ. ಪ್ರಕಾಶ್ : ನಾಳೆ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಬಿ. ಬಿ. ಶಿವಪ್ಪ : ಸೈನಿಕರ ಗದ್ದುಗೆ ವಿಚಾರಕ್ಕೆ ಸಂಬಂಧಿಸಿದಂತೆ ಅಲ್ಲಿ ೧೯ ಚಿಲ್ಲರೆ ಎಕರೆಯಷ್ಟು ಭೂಮಿ ಅಕ್ವೈರ್ ಆಗಿ ಎನ್‌ಕ್ರೋಚ್‌ಮೆಂಟ್ ಆಗುತ್ತಿದೆ.

ಅಧ್ಯಕ್ಷರು : ನಾಳೆ ದಿವಸ ಚರ್ಚೆಗೆ ಆ ವಿಷಯವನ್ನು ತೆಗೆದಕೊಳ್ಳೋಣ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಬಿಪಿ ಎಲ್ ಬಗ್ಗೆ, ಸುರತ್ಕಲ್ ಗಲಭೆ ಬಗ್ಗೆ ಹಾಗೂ ಕೆ. ಎ. ಪಿ. ಎಲ್. ಬಗ್ಗೆ, ಈ ಮೂರು ವಿಚಾರಗಳ ಬಗ್ಗೆ ಸಂಬಂಧಪಟ್ಟ ಸಚಿವರಿಂದ ಹೇಳಿಕೆಯನ್ನು ನಾಳೆ ಮಾಡಿಸುತ್ತಿದ್ದು, ದಯಮಾಡಿ ಸಹಕರಿಸಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಸದಸ್ಯರಾದ ಶಿವಪ್ಪನವರು ಪ್ರಸ್ತಾಪಿಸಿರುವಂತೆ ಆ ಗದ್ದುಗೆ ಜಾಗದಲ್ಲಿ ಮಸೀದಿಯನ್ನು ಕಟ್ಟುತ್ತಿರುವುದು ತುಂಬಾ ಗಂಭೀರವಾದ ವಿಚಾರವಾಗಿರುವುದರಿಂದ, ಅಲ್ಲಿ ಏನು ಸಮಸ್ಯೆ ಉದ್ಭವಿಸಿದೆ ಎನ್ನುವುದರ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಈ ವಿಷಯವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಪ್ರಕಾಶರವರೆ, ತಾವು ನಾಳೆ ಸ್ವಲ್ಪ ಮುತುವರ್ಜಿ ವಹಿಸಬೇಕು. ಏಕೆಂದರೆ, ನಾಳೆ ದಿವಸ ನಾನು ಇರುವುದಿಲ್ಲ. ಸಭಾ ನಾಯಕರಲ್ಲಿ ನಾನು ಅನಂತರ ವಿನಂತಿಸಿಕೊಳ್ಳುತ್ತೇನೆ. ಉಪಾಧ್ಯಕ್ಷರು ಇರುವುದರಿಂದ ಬಿಪಿ ಎಲ್ ಬಗ್ಗೆ, ಸುರತ್ಕಲ್ ಗಲಭೆ ಬಗ್ಗೆ ಹಾಗೂ ಕೆ.ಎ.ಪಿ.ಎಲ್ ಬಗ್ಗೆ, ಈ ಮೂರೂ ವಿಚಾರಗಳಿಗೆ ಸಂಬಂಧಿಸಿದಂತೆ ಉಪಾಧ್ಯಕ್ಷರಿಗೆ

ತಾವು ಸಹಕರಿಸಿ ಹೇಳಿಕೆಗಳನ್ನು ಮಾಡಿಸಬೇಕಾಗುತ್ತದೆ. ಈ ದಿಶೆಯಲ್ಲಿ ನನ್ನ ಜೊತೆ ಸಹಕರಿಸಬೇಕು. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಹ ನಾಳೆ ಬೆಳಿಗ್ಗೆ ೧೦.೦೦ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ ೬ಗಂಟೆ ೧೦ ನಿಮಿಷಕ್ಕೆ ಮುಕ್ತಾಯಗೊಂಡು ಪುನ:

ದಿನಾಂಕ ೧೬ನೇ ಮಾರ್ಚ್ ಮಾಹೆ ೧೯೯೯ರ ಮಂಗಳವಾರದಂದು ಬೆಳಿಗ್ಗೆ ೧೦.೦೦ ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)